ಎಲ್ಲರಿಗೂ ಒಳ್ಳೆಯದಾಗುದನ್ನು ಆಚರಿಸಿಕೊಂಡು ಹೋಗಿರಿ" ಎಂಬ ಸ್ವಾಮಿಗಳ ವಿಚಾರದೃಷ್ಟಿಯ ಬೆಳಕನ್ನು ಎದೆಯೊಳಗೆ ತುಂಬಿಕೊಂಡ ಜನ, ಅವರ ಸನ್ನಿಧಾನದಲ್ಲಿ ಊರಿನ ಸಮಾಜವನ್ನು ಅಸ್ತಿತ್ವಕ್ಕೆ ತಂದರು.

ಎಲ್ಲವ್ವನ ಮಗಳ ಮೇಲಾದ ಘಟನೆಯಿಂದ ಹನುಮಂತ ದೇವರ ಓಕುಳಿ ನಿಂತೇ ಹೋಗಿತ್ತು. ಈಗ ಊರಿನ ಹಿರಿಯರು ಓಕುಳಿಯ ಹೊಂಡವನ್ನು ಕಲ್ಲುಮಣ್ಣುಗಳಿಂದ ಶಾಶ್ವತವಾಗಿ ಮುಚ್ಚಿಸಿ ಬಿಟ್ಟರು. ಯಾವ ವರ್ಗದ ಜನರ ಬಗ್ಗೆಯೂ ಮನಸ್ಸಿನಲ್ಲಿ ಸಂಶಯದ ಬೀಜವೂರಿಕೊಳ್ಳುವ, ಅವರನ್ನು ಅಪಮಾನಕ್ಕೊಳಪಡಿಸುವ, ದಮನಿಸುವ ಅಹಂನ ನಡವಳಿಕೆಗೆ ವಿದಾಯ ಹೇಳಿದ ಹಿರಿಯರು ಜೀವಪುರದ ಕಾಂತಿ ಹೆಚ್ಚಿಸಿದರು.

★★★

ಸೂರ್ಯಚಂದ್ರರು ಬೆಳಗುತ್ತಿದ್ದರು. ನಕ್ಷತ್ರಗಳು ಹೊಳೆಯುತ್ತಿದ್ದವು. ಋತುಗಳು ಸರಿದು ಹೋಗುತ್ತಿದ್ದವು. ವಸುದೈವ ಕುಟುಂಬ ವಾತ್ಸಲ್ಯ ಜೀವಪುರದಲ್ಲಿ ಥಾಳವಾಗಿರುವುದನ್ನು ಕಂಗಳ ತುಂಬಿಕೊಂಡು ಆನಂದಿಸುತ್ತಿದ್ದ ಶ್ರೀಗಳು ವಯಸ್ಸು ಮತ್ತು ದೈಹಿಕ ಬಾಧೆಯಿಂದ ಲಿಂಗೈಕ್ಯರಾದರು. ಅವರ ಅಗಲಿಕೆಯಿಂದ ಹಿರಿಯರು ಕಂಗೆಟ್ಟರೂ, ಶ್ರೀಗಳ ಮಾತಿನಂತೆ ಊರಿನ ಶಾಂತಿ, ನೆಮ್ಮದಿಯನ್ನು ಕಾಯ್ದುಕೊಂಡು ಮುಂದುವರೆದಿದ್ದರು.

ಶ್ರೀಮಠಕ್ಕೆ ಹೊಸ ಸ್ವಾಮಿಗಳ ಪ್ರವೇಶವಾಯಿತು. ಅವರ ಪಟ್ಟಾಧಿಕಾರವು ವಿಜೃಂಭಣೆಯಿಂದ ನಡೆಯಿತು. ಜೀವಪುರದ ಎಲ್ಲಾ ವರ್ಗದ ಜನ ಈ ಸಮಾರಂಭವನ್ನು ತಮ್ಮ ತನುಮನಧನಗಳಿಂದ ಅರ್ಥಪೂರ್ಣವಾಗಿಸಲು ಶ್ರದ್ಧಾಭಕ್ತಿ ತೋರಿದ್ದರು.

ಮೊದಮೊದಲು ತಾವು ಭಕ್ತರಲ್ಲಿ ಭಗವಂತನನ್ನು ಕಾಣುವೆನೆಂದು ಹಸನ್ಮುಖದಿಂದ, ಮಕ್ಕಳ ಶುಭ್ರಹೃದಯದಿಂದ ಉಲಿಯುತ್ತಿದ್ದ ಹೊಸ ಸ್ವಾಮೀಜಿ ಊರಿನ ಹಿರಿಯರನ್ನು ಕಡೆಗಣಿಸುತ್ತ ಬಂದರು. ಜಾತ್ಯತೀತವಾದ ಶ್ರೀಮಠಕ್ಕೆ ಜಾತಿಯ ಮುಸುಕು ಹೊದಿಸಿದರು. ಭಕ್ತರನ್ನು ವರ್ಣ ಮತ್ತು ವರ್ಗಭೇದದಿಂದ ತೂಗತೊಡಗಿದರು. ಹಿಂದಿನ ಸ್ವಾಮಿಗಳ ಮತ್ತು ಊರಿನ ಹಿರಿಯರ ಬಗ್ಗೆ ಒಳಗೊಳಗೆ ಅಸಹನೆಯಿಂದ ಕುದಿಯುತ್ತಿದ್ದ ಕೆಲವು ಸ್ವಾರ್ಥಿಗಳು, ಮತಾಂಧರನ್ನು ಮಠದ ಆವರಣದೊಳಗೆ ಬಿಟ್ಟುಕೊಂಡರು. ರಾಜಕಾರಣಿಗಳನ್ನು ಶ್ರೀಮಂತರನ್ನು ಓಲೈಸುತ್ತ ತತ್ವಾದರ್ಶಗಳ ಪುರಾಣ, ಆಶೀರ್ವಚನಕ್ಕೆ ಸೀಮಿತವಾಗಿ ಜೀವಪುರವನ್ನು ತಮ್ಮ ರಿಮೋಟ್ ಕಂಟ್ರೋಲ್‌ನಲ್ಲಿರಿಸಿಕೊಳ್ಳಲು, ಆ ಮೂಲಕ ಮಠದ ಆರ್ಥಿಕ ಸ್ಥಿತಿಯನ್ನು ವರ್ಧಿಸಲು ಇಚ್ಛಿಸಿದರು. ಊರಿನ ಶಾಂತಿ ಕದಡುವುದಕ್ಕೆ ಬೇಕಾದ ತಾಲೀಮು ಶುರುವಿಟ್ಟುಕೊಂಡರು. ಸದುವಿನಯವೇ ಸದಾಶಿವನೊಲುಮೆ, ಸಕಲ ಜೀವಾತ್ಮರಿಗೆ ಲೇಸಾಗಲಿ ಎಂಬ ಅಮೃತದ ಮಾತುಗಳನ್ನು ಹೇಳುತ್ತ, ಭಾಗವಹಿಸಿದ ಸಮಾರಂಭಗಳಲ್ಲಿ ಜಾತಿಯ ವಿಷವನ್ನು ಭಕ್ತರೆದೆಗೆ ಬಸಿಯತೊಡಗಿದರು. ಅವರ ಆಶೀರ್ವಚನ ಪ್ರಚೋದನಕಾರಿಯೂ, ಭೀಕರವೂ ಆಗಿ ಜೀವಪುರದ ಮಾನವೀಯ ಹೃದಯಗಳನ್ನು ದಿಕ್ಕೆಡಿಸಿತು.

ಸ್ವಾಮೀಜಿ ಮಠದ ಕಾರ್ಯಕ್ರಮಗಳಿಂದ ತಮ್ಮನ್ನು ದೂರವಿಟ್ಟರೂ ಊರಿನ ಹಿರಿಯರು ಅಸಮಾಧಾನಗೊಳ್ಳಲಿಲ್ಲ. ಇನ್ನುಳಿದಂತೆ ಊರೊಟ್ಟಿನ ಉತ್ಸವಗಳು ಜನರ ಸಹಕಾರದಿಂದ ಸಾಂಗಗೊಳ್ಳುತ್ತಲೇ ಇದ್ದವು. ಅದು ಜೀವಪುರದ ಮಣ್ಣಿನ ಗುಣವೆನಿಸಿತ್ತು. ಇದನ್ನು ಅರ್ಥೈಸಿಕೊಳ್ಳದ ಸ್ವಾಮೀಜಿ ಹಿರಿಯರ ಮೇಲೆ ದ್ವೇಷ ಕಾರತೊಡಗಿದ್ದರು. ಪಾದಪೂಜೆಯ ನೆಪದಿಂದ ಮನೆಮನೆಗಳಿಗೂ ಹೋಗಿ. ಭಕ್ತರ ಮನದಲ್ಲಿ ಜಾತಿಯ ವಿಷಬೀಜಗಳನ್ನು